ಅಸಲು ದಾವೆ ಸಂಖ್ಯೆ - 184/2015
ಡಿ.ಡಬ್ಲ್ಯೂ - 01
ದಿನಾಂಕಃ 26-03-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಸಿ ಬಿ ಪಿ ವಕೀಲರಿಂದ**

ವಾದಿಯರು ನಿಪಿ- 11 ರಂತೆ ಮೇಲ್ಮಮನವಿ ಸಲ್ಲಿಸಿದ್ದರು ಎಂದರೆ ಅದರಲ್ಲಿ ನಾನು ಪಕ್ಷಗಾರನು ಇರುವುದಿಲ್ಲ ಮತ್ತು ಅದು ನನಗೆ ಅನ್ವಯಿಸುವುದಿಲ್ಲ. ಸದರಿ ಮೇಲ್ಮಮನವಿ ದಾವಾ ಆಸ್ತಿಗೆ ಸಂಬಂಧಪಟ್ಟಿದು ಇದೆ ಎಂದರೆ ಇರಬಹುದು ಆದರೆ ಪ್ರಸ್ತುತವಾಗಿ ಅದು ಸರ್ಕಾರದ ಕಬ್ಜೆಯಲ್ಲಿ ಇರುತ್ತದೆ. ನಿಪಿ- 11 ಮತ್ತು 12 ನ್ನು ನೀವು ಓದಿ ತಿಳಿದು ಕೊಂಡಿದ್ದೀರಾ ಎಂದರೆ ಅದು ನಮಗೆ ಅನ್ವಯಿಸುವುದಿಲ್ಲ ಮತ್ತು ಓದಿ ತಿಳಿದುಕೊಂಡಿಲ್ಲ. ಉಪ ವಿಭಾಗಾಧಿಕಾರಿಗಳು ಸವಣೂರ ನಂ. 2/2020-21 ರಲ್ಲಿ ಮಾಡಿದ ಆದೇಶ ವಜಾ ಆಗಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ನೀವು ವಾದಿಯರ ಆಸ್ತಿಯನ್ನು ಅತೀಕ್ರಮಣ ಮಾಡಿ ಅದರಲ್ಲಿ ತಗಡಿನ ಶೆಡ್ಡನ್ನು ಹಾಕಿ ವ್ಯಾಪರ ಮಾಡುತ್ತಿದ್ದೀರಿ ಎಂದರೆ ಸುಳ್ಳು. ಮುಂದುವರೆದು ನಾನು ಸದರಿ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ನೀವು ಖರೀದಿ ಹಿಡಿದಿರುವ ಆಸ್ತಿ ನಿಮಗೆ ಮಾರಾಟ ಮಾಡಿದವರಿಗೆ ಹೇಗೆ ಬಂದಿತ್ತು ಎಂದರೆ ಅದು ಅವರ ಪೂರ್ವಜರ ಆಸ್ತಿ ಇತ್ತು. ಅದು ಅವರ ಪೂರ್ವಜರ ಆಸ್ತಿ ಇರುವುದಿಲ್ಲ, ನೀವು ಕಾನೂನು ಬಾಹಿರವಾಗಿ ಆಸ್ತಿ ಖರೀದಿ ಮಾಡಿರುತ್ತೀರಿ ಎಂದರೆ ಸುಳ್ಳು. ನೀವು ವಾದಿಯರ ಆಸ್ತಿಯನ್ನು ಅೀತಿಕ್ರಮಣ ಮಾಡಿ, ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಮತ್ತು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.